**PW1**

# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ, ದಂ ಕಂ

## O.S. 304/17

| | | |
|---|---|---|
| ಹೆಸರು | ಃ | ಮುತ್ತಯ್ಯ ಗೌಡ |
| ತಂದೆಯ ಹೆಸರು | ಃ | ಅಣ್ಣು ಗೌಡ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ಕೃಷಿ |
| ವಾಸ | ಃ | ಇಚ್ಚಿಲ ಮನೆ, ಉಜಿರೆ ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 24.4.2019 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಪಿಕೆಎಸ್ ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ನನ್ನ ಪರವಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸುತ್ತಿದ್ದೇನೆ.

ನಾನು ಬೆಳ್ತಂಗಡಿ ಭೂನ್ಯಾಯಮಂಡಳಿಯವರಿಗೆ ನಮೂನೆ 7ರಂತೆ ಸಲ್ಲಿಸಿದ ಅರ್ಜಿಯ ದೃಢೀಕೃತ ಪತ್ರವನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಭೂನ್ಯಾಯ ಮಂಡಳಿಯವರು ಮಾಡಿರುವ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಬೆಳ್ತಂಗಡಿ ಭೂನ್ಯಾಯಮಂಡಳಿಯವರು ನಮೂನೆ 10ರಂತೆ ನೀಡಿರುವ ದೃಢೀಕೃತ ನಮೂನೆಯನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಉಜಿರೆ ಗ್ರಾಮದ ಸ.ನಂಃ 98ಃ4ಪಿ3 ಯ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಉಜಿರೆ ಗ್ರಾಮದ ಸ.ನಂಃ 98ಃಅ ಯಿಂದ 98ಃಉ ವರೆಗೆ 5 ದೃಢೀಕೃತ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-5 ರಿಂದ ನಿಪಿ-9 ಎಂದು ಗುರುತಿಸಲಾಯಿತು. ಪುತ್ತೂರು ಉಪವಿಭಾಗದ ಸಹಾಯಕ

ಆಯುಕ್ತರವರು ಮಾಡಿರುವ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ದಿಃ 5.12.2008ರಲ್ಲಿ ಸವಿತಾ ಎಂಬುವವರು ಪದ್ಮಾಕ್ಷಿ ಎಂಬುವವರಿಗೆ ಮಾಡಿ ಕೊಟ್ಟಿರುವ ಖುಲಾಸೆ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರುತ್ತೇನೆ. **ಪಾಟೀ ಸವಾಲುಃ** ಮಾನ್ಯ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೆ.ಸ.ಇ.ಎ.ಒ)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಬೆಳ್ತಂಗಡಿ